ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

8

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19 (MLA-MLC)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ  ದಿನಾಂಕ : DATE : 7/7/2020


# ಶಾಸಕ-ಸಂಸದರಿಗೂ ಕರೊನಾ ಸೋಂಕು

**ಬೆಂಗಳೂರು:** ಕರೊನಾ ಸಂದರ್ಭ ಜನರಿಗೆ ಅಷ್ಟೋ ಇಷ್ಟೋ ನೆರವಾಗುತ್ತಿದ್ದ ಜನಪ್ರತಿನಿಧಿಗಳಲ್ಲಿ ಈಗ ಸೋಂಕಿನ ಭೀತಿ ಆವರಿಸಿದೆ. 1 ವಾರದಲ್ಲಿ ಐವರು ಜನಪ್ರತಿನಿಧಿಗಳಲ್ಲಿ ಸೋಂಕು ಕಾಣಿಸಿಕೊಂಡಿದ್ದು, ಎಲ್ಲರೂ ಸ್ವಯಂ ಕ್ವಾರಂಟೈನ್‌ಗೊಳಗಾಗಿದ್ದಾರೆ.

ಶಾಸಕ ಭರತ್‌ಶೆಟ್ಟಿ, ಮಾಜಿ ಉಪಸಭಾಪತಿ ಪುಟ್ಟಣ್ಣ, ಎಂಎಲ್ಸಿ ಪ್ರಾಣೇಶ್‌ಗೆ ಸೋಂಕು ಕಾಣಿಸಿಕೊಂಡಿತ್ತು. ಸೋಮವಾರ ಬೆಳಗ್ಗೆ ಕುಣಿಗಲ್ ಶಾಸಕ ರಂಗನಾಥ್‌ರಲ್ಲಿ ಸೋಂಕಿರುವುದು ಖಾತ್ರಿಯಾಗಿತ್ತು. ಸಂಜೆ ಮಂಡ್ಯ ಸಂಸದೆ ಟ್ವೀಟ್ ಮಾಡಿ, 'ನಾನೂ ಕರೊನಾ ಸೋಂಕಿತೆ' ಎಂದು ಘೋಷಿಸಿಕೊಂಡರು. ಜು.4ರಂದು ಸ್ವಲ್ಪ ತಲೆ-ಗಂಟಲು ನೋವು ಕಾಣಿಸಿಕೊಂಡಿತ್ತು. ನಿರಂತರವಾಗಿ ಕ್ಷೇತ್ರದ ಕಾರ್ಯಗಳಲ್ಲಿ ತೊಡಗಿದ್ದರಿಂದ ಮತ್ತು ಕರೊನಾಪೀಡಿತ ಪ್ರದೇಶಗಳಿಗೂ ಭೇಟಿ ಕೊಟ್ಟಿದ್ದರಿಂದ ಪರೀಕ್ಷೆಗೆ ಒಳಗಾದೆ. ಸೋಮವಾರ ಪಾಸಿಟಿವ್ ಫಲಿತಾಂಶ ಬಂದಿದೆ. ವೈದ್ಯರ ಸಲಹೆ ಮೇರೆಗೆ ಅಗತ್ಯ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದೇನೆ. ಮನೆಯಲ್ಲಿಯೇ ಕ್ವಾರಂಟೈನ್‌ಗೆ ಒಳಪಟ್ಟಿದ್ದೀನಿ ಎಂದು ಸುಮಲತಾ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.



ಪ್ರಾಣೇಶ್



ರಂಗನಾಥ್

ರೋಗನಿರೋಧಕ ಶಕ್ತಿ ನನ್ನಲ್ಲಿ ಪ್ರಬಲವಾಗಿದೆ ಮತ್ತು ನಿಮ್ಮ ಆಶೀರ್ವಾದ ನನ್ನ ಮೇಲೆ ಇರುವುದರಿಂದ ಬೇಗ ಗುಣಮುಖ ಆಗುತ್ತೇನೆ. ಈಗಾಗಲೇ ನನ್ನನ್ನು ಭೇಟಿಯಾದ ವ್ಯಕ್ತಿಗಳ ವಿವರವನ್ನು ಅಧಿಕಾರಿಗಳಿಗೆ ಕೊಟ್ಟಿರುವೆ. ಆದರೂ ನನ್ನನ್ನು ಭೇಟಿಯಾದವರಲ್ಲಿ ಯಾರಿಗಾದರೂ ಕೋವಿಡ್ ಲಕ್ಷಣಗಳು ಕಂಡುಬಂದಲ್ಲಿ ಕೂಡಲೇ ಪರೀಕ್ಷೆ ಮಾಡಿಸಲು ವಿನಂತಿಸುತ್ತೇನೆ. ನಿಮ್ಮ ಹಾರೈಕೆ ಇರಲಿ ಎಂದು ಸುಮಲತಾ ಕೋರಿದ್ದಾರೆ.

ರಂಗನಾಥ್ ಸಹ ವಿಡಿಯೋ ಬಿಡುಗಡೆ ಮಾಡಿದ್ದು, ಬೆಂಗಳೂರಿನಲ್ಲಿ ಕ್ವಾರಂಟೈನ್ ಆಗಿದ್ದು ಆರೋಗ್ಯವಂತನಾಗಿ ಬರುವುದಾಗಿ ಹೇಳಿದ್ದಾರೆ. ಪ್ರಾಣೇಶ್ ಪತ್ನಿಗೂ ಸೋಂಕು ತಗುಲಿದ್ದು, ಇವರಿಬ್ಬರೂ ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶಾಸಕರಾದ ದಿನೇಶ್ ಗುಂಡೂರಾವ್, ರಾಜೂಗೌಡ ಸೇರಿ ಹಲವು ಶಾಸಕರು ಸ್ವಯಂಪ್ರೇರಿತರಾಗಿ ಟೆಸ್ಟ್ ಮಾಡಿಕೊಂಡಿದ್ದಾರೆ. ಮಂಗಳವಾರ ಕೆಪಿಸಿಸಿ ಕಚೇರಿ ಮತ್ತು ಕೆಲ ಮುಖಂಡರನ್ನು ತಪಾಸಣೆಗೊಳಪಡಿಸಲಾಗುತ್ತದೆ.